ನಿಂದ ಪ್ರತ್ಯೇಕವಾದ ಲೋನ್ ಕೊಡತಕ್ಕ ಕೆಲಸವನ್ನು ಮಾಡಿ ಶೀಘ್ರವಾಗಿ ಕೆಲಸ ಪ್ರಾರಂಭ ಮಾಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ತಾವು ಇದನ್ನು ಬೇರೆ ರೂಪದಲ್ಲಿ ಕಳುಹಿಸಿ, ಚರ್ಚೆ ಮಾಡೋಣ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

ಬೆಂಗಳೂರು ಮಹಾ ನಗರಪಾಲಿಕೆಯ ಜಮೀನಿನ ಅನಧಿಕೃತ ಸ್ವಾಧೀನ

926Ë ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೇರುಘಟ್ಟ ರಸ್ತೆಯ ಸರ್ವೆ ನಂ. 84:2 ರಸ್ತೆಯ ಮಹಾನಗರಪಾಲಿಕೆಯ ಭೂಮಿಯನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅನಧಿಕೃತವಾಗಿ ಆಕ್ರಮಿಸಿ ಕೊಂಡಿರುವ ಭೂಮಿಯ ವಿಸ್ತೀರ್ಣವೆಷ್ಟು?

ಇ) ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಭೂಮಿಯನ್ನು ತೆರವು ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದಂಥ ಮೂಲ ಪ್ರಶ್ನೆಯೇ ಬೇರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಪ್ರಶ್ನೆಯೇ ಬೇರೆ ಇದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ನಾನು ಬಯಸುತ್ತಿದ್ದೇನೆ. ಬೆಂಗಳೂರಿನಲ್ಲಿರತಕ್ಕ ಬನ್ನೇರುಘಟ್ಟ ಸರ್ವೆ ನಂ 82ರಲ್ಲಿ ಬಹಳ ಫಲವತ್ತಾದೇ ಮತ್ತು ಬೆಲೆ ಬಾಳುವಂಥ ಜಮೀನು ಏನಿದೆ, ಅದನ್ನು ಒಬ್ಬ ಖಾಸಗಿ ಕಾರ್ಪೊರೇಟರ್ ಅವರು ಸ್ವಾಧೀನಪಡಿಸಿಕೊಂಡಿದ್ದಾರೆ. ಆ ಸರ್ವೆ ನಂಬರಿನಲ್ಲಿ, ಬೆಂಗಳೂರು ಡೈರಿ ಎಂಪ್ಲಾಯ್‌ಮೆಂಟ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಸಲುವಾಗಿ 1990ರಲ್ಲಿ ಕಾರ್ಪೊರೇಷನ್‌ನವರು 26 ಗುಂಟೆ ಜಮೀನು ಈ ಬೆಂಗಳೂರು ಡೈರಿ ಹೌಸಿಂಗ್ ಸೊಸೈಟಿಯವರಿಗೆ ಕೊಟ್ಟಿದ್ದಾರೆ. ಉಳಿದ 16 ಗುಂಟೆ ಜಮೀನು ಏನಿದೆ, ಅದು ಬೆಂಗಳೂರಿನಲ್ಲಿರತಕ್ಕ ಒಂದು ಫಲವತ್ತಾದ ಭೂಮಿ, ಕಾರ್ಪೊರೇಷನ್‌ಗೆ ಸಂಬಂಧಪಟ್ಟಂಥ ಭೂಮಿ, ಬೇರೆ ಯಾರೋ ಒಬ್ಬರು ಖಾಸಗಿ ವ್ಯಕ್ತಿಗಳು ಕೈವಾಡದಿಂದ ಫಲವತ್ತಾದ ಒಂದು ಕೋಟಿ ರೂಪಾಯಿ ಬೆಲೆ ಬಾಳುವಂಥ ಭೂಮಿಯನ್ನು ಒಬ್ಬ ಕಾರ್ಪೊರೇಟರ್‌ರವರು ನುಂಗುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಚೌಡರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಸರ್ವೆ ನಂ. 8402, ಇದು ಕಾರ್ಪೊರೇಷನ್ ಲ್ಯಾಂಡ್ ಆಗುತ್ತದೆ. ಇದು 11,882.5 ಸ್ಕ್ವೇರ್ ಫೀಟ್ ಇದೆ. ಇಲ್ಲಿ ಸ್ವಲ್ಪ ಲೋ ಲೆವೆಲ್ ಇದೆ. ಅಲ್ಲಿ ಅವರು, ಇವರು ಅನೇಕ ಜನ ಅನ್ ಐಡೆಂಟಿಫೈಡ್ ಲಾರಿ ವ್ಹೀನರ್ಸ್ ಸ್ವಲ್ಪ ಜಲ್ಲಿ, ಕಲ್ಲು ಲೋಡ್ ಮಾಡುತ್ತಿದ್ದರು. ಈಗ ಅದನ್ನೆಲ್ಲಾ ತೆಗೆಸಿದ್ದೇವೆ. ಈಗ ಅದನ್ನು ಕಾರ್ಪೊರೇಷನ್ ನಲ್ಲೇ ಇಟ್ಟುಕೊಂಡಿದ್ದೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಅಧ್ಯಕ್ಷಣಿಯವರೆ, ಸರ್ವೆ ನಂಬರ್ 84ಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದಾರೆ. ಸರ್ವೆ ನಂಬರ್ 82ರಲ್ಲಿ ಇರತಕ್ಕಂತಹ ಪ್ರಶ್ನೆಯಲ್ಲಿ ಫಲವತ್ತಾದಂಥ ಈ ಜಮೀನು ಏನು ಇದೆ. ಇದಕ್ಕೆ ಪಟ್ಟಾ ಮಾಡಿಕೊಳ್ಳುವಂಥ ಪ್ರಯತ್ನವನ್ನು ಒಬ್ಬ ಕಾರ್ಪೊರೇಟರ್ ರವರು ಮಾಡುತ್ತಿದ್ದಾರೆ. ಈಗಾಗಲೇ ಆ ಸ್ಥಳೀಯ ಶಾಸಕರಾದಂತಹ ಶ್ರೀಮಾನ್ ರಾಮಲಿಂಗರೆಡ್ಡಿಯವರು ಕೂಡಾ ಅದರ ಬಗ್ಗೆ ಕಾರ್ಪೊರೇಷನ್ನಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡ ಹೇಳಿದ್ದಾರೆ. ಇದು ಕಾರ್ಪೊರೇಷನ್ ಗೆ ಸಂಬಂಧಪಟ್ಟ ಫಲವತ್ತಾದ ಜಮೀನು. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅತಿಕ್ರಮವಾಗಿ ಅವರು ಈ ಸರ್ವೆ ನಂಬರ್ ನ್ನು ಕಬಳಿಸುತ್ತಿದ್ದಾರೆ? ಸರ್ವೆ ನಂಬರ್ 82 ಕ್ಕೆ ಸಂಬಂಧಪಟ್ಟಂತ ನಾನು ಕೇಳುತ್ತಿದ್ದೇನೆ. ತಾವು ಸರ್ವೆ ನಂಬರ್ 84ಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಿ.

ಶ್ರೀ ಚೌಡರೆಡ್ಡಿ : ಇಲ್ಲಿ ಅವರು ಪ್ರಶ್ನೆ ಹಾಕಿರುವ ಕಡೆ ಸರ್ವೆ ನಂಬರ್ 84Ë2 ಎಂದು ಇದೆ. ಆದರೆ 82 ಅನ್ನುತ್ತಾ ಹೇಳುತ್ತಿದ್ದೀರಿ. ನೀವು ಬೇರೆ ಪ್ರಶ್ನೆ ಕಳಿಸಿ, ಬೇರೆ ಉತ್ತರ ಕಳುಹಿಸುತ್ತೇನೆ. ನೀವೇ ಸ್ಪೆಸಿಫಿಕ್ ಆಗಿ ಬರೆದಿದ್ದೀರಿ. ಸರ್ವೆ ನಂಬರ್ 84Ë2 ಎಂದು ಇದೆ.

ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳು

941Ëಶ್ರೀ ಕೆ. ಸಿದ್ಧಯ್ಯ (ಸಂತೇಮಾರನ ಹಳ್ಳಿ : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿಗಳ ಆರ್ಥಿಕ ಅಭಿವೃದ್ಧಿಗೆ ಹಮ್ಮಿಕೊಳ್ಳಲಾದ ಯೋಜನೆಯಲ್ಲಿ ಒದಗಿಸಲಾದ ಎತ್ತು ಚಕ್ಕಡಿಗಳ ಪೂರೈಕೆ ಜೊತೆ ಎತ್ತುಗಳು ಹಾಗೂ ಕೃಷಿ ಉಪಕರಣಗಳನ್ನು ಫಲಾನುಭವಿಗಳು ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರವು ಈ ಸವಲತ್ತುಗಳು ಸರಿಯಾದ ಉಪಯೋಗದ ಬಗ್ಗೆ ಹಾಗೂ ಒದಗಿಸಿದ ಸೌಲಭ್ಯಗಳು ನಿಜವಾಗಿಯೂ ಫಲಾನುಭವಿಗಳ ಅಭಿವೃದ್ಧಿಗೆ ಅನುಗುಣವಾಗಿವೆಯೇ ಎಂಬುದನ್ನು ತಿಳಿಯಲು ಮೌಲ್ಯ ನಿರ್ಣಯ: ಅಧ್ಯಯನ ನಡೆಸಲು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಎತ್ತು, ಎತ್ತಿನ ಗಾಡಿ ಹಗೂ ವ್ಯವಸಾಯ ಉಪಕರಣಗಳನ್ನು ಫಲಾನುಭವಿಗಳು ಕೆಲವು ಪ್ರಕರಣಗಳಲ್ಲಿ ಸದುಪಯೋಗಪಡಿಸಿಕೊಳ್ಳದೇ ಇರುವುದು